ಕರ್ನಾಟಕ ವಿಧಾನ ಸಭೆ

315 ಶ್ರೀ ಅಮರೇಶ್ (ಮುಳಬಾಗಿಲು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;–

ಅ) ಮುಳಬಾಗಿಲು ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ರಸ್ತೆಗಳು ತುಂಬಾ ಹದಗೆಟ್ಟಿದ್ದು, ಸಾರ್ವಜನಿಕರು ಓಡಾಡಲು ಸಹ ಯೋಗ್ಯವಿಲ್ಲದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ರಸ್ತೆಗಳ ದುರಸ್ಥಿಗಾಗಿ ಸರ್ಕಾರದ ಈಗಾಗಲೇ ಅನುದಾನ ಬಿಡುಗಡೆ ಮಾಡಿದೆಯೇ;

ಈ) ಹಾಗಿದ್ದಲ್ಲಿ ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಿ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು);

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) 2011–12ನೇ ಸಾಲಿನಲ್ಲಿ ಮುಳಬಾಗಿಲು ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆಗಳ ದುರಸ್ತಿಗಾಗಿ ವಿವಿಧ ಲೆಕ್ಕಶೀರ್ಷಿಕೆಯಡಿ ರೂ. 267.16 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ರೂ.234.12 ಲಕ್ಷ ವೆಚ್ಚದಲ್ಲಿ 61 ಮೋರಿಗಳು ಹಾಗೂ 53.74 ಕಿ.ಮೀ. ರಸ್ತೆ ನಿರ್ವಹಣೆ/ಅಭಿವೃದ್ಧಿ ಮಾಡಲಾಗಿದೆ.

ಪ್ರಸ್ತುತ 2012–13ನೇ ಸಾಲಿಗೆ ವಿವಿಧ ಲೆಕ್ಕಶೀರ್ಷಿಕೆಗಳಡಿ ರೂ.295.05 ಲಕ್ಷ ಅನುದಾನದಲ್ಲಿ 110 ರಸ್ತೆ ಕಾಮಗಾರಿಗಳನ್ನು ಕೈಗೊಂಡು 29.80 ಕಿ.ಮೀ. ರಸ್ತೆಗಳ ಅಭಿವೃದ್ಧಿ/ ನಿರ್ವಹಣೆ ಮಾಡಲು ಯೋಜಿಸಿದೆ. ವಿವರ ಅನುಬಂಧದಲ್ಲಿ ನೀಡಿದೆ.

ಇ) ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ–3054 ರಡಿ ಆಯವ್ಯಯ ಅನುದಾನವು ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಯಾಗುತ್ತದೆ.

ಲೆಕ್ಕಶೀರ್ಷಿಕೆ–5054 ರಡಿಯ ಕಾಮಗಾರಿಗಳಿಗೆ ಪ್ರತಿ ಆಧರಿಸಿ, ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗುತ್ತದೆ.

13ನೇ ಹಣಕಾಸು ಆಯೋಗದ ಕಾರ್ಯಕ್ರಮದಡಿ ಕ್ರೋಡಿಕೃತ ಕ್ರಿಯಾ ಯೋಜನೆಗೆ ಉನ್ನತ ಮಟ್ಟದ ಸಮಿತಿ ಅನುಮೋದನೆ ನೀಡಿದ ನಂತರ ಅನುದಾನ ಬಿಡುಗಡೆಯಾಗುತ್ತದೆ.

ಈ) 2012–13ನೇ ಸಾಲಿನಲ್ಲಿ ಯೋಜಿತ ಕಾರ್ಯಕ್ರಮದಡಿ ಅನುದಾನ ಬಿಡುಗಡೆ ಕಾಯ್ದಿರಿಸಿ, ಕೆಳಕಂಡಂತೆ ಕ್ರಮ ವಹಿಸಲಾಗಿದೆ.

1) ಲೆಕ್ಕ ಶೀರ್ಷಿಕೆ–5054 ಗ್ರಾಮೀಣ ಸಂಪರ್ಕ ಯೋಜನೆಯ 68 ಹೆಚ್ಚುವರಿ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ.

2) 13ನೇ ಹಣಕಾಸು ಆಯೋಗ ಯೋಜನೆಯ 16 ರಸ್ತೆ ಕಾಮಗಾರಿಗಳ ನಿರ್ವಹಣೆ ಹಗೂ ಸಿಎಂಜಿ ಎಸ್‌ವೈಲೆ. ಶೀ–3054 ರಡಿ 26 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಕೈಗೊಂಡು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.

Karnataka Legislative Assembly
13th Legislature
14th Session

919 Sri H.D.Revanna (Holenarasipur) : Minister for Public Works :

a) Whether the approval has been obtained in respect of Appendix-E works for the year 2012-13 by the Public works Ports and Inland Water Transport Department.

b) If so, approval has been obtained for which works, whether the works have been started already? (Details to be furnished) ;

Sri C.M. UDASI (Minister for Public works) :

a) Action will be taken to prepare Appendix-E Confirming the Allocation of grants to the department with the approval of full budget by the Legislature for the year 2012-13.

b) Does not arise.